# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 26 (35)
ಮಾನ್ಯ ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 04.07.2023
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು, ಬೆಳ್ಳಂದೂರು ಗ್ರಾಮದಲ್ಲಿ ದಶಾನ್ಯ ಟೆಕ್ ಪಾರ್ಕ್ ಸಂಸ್ಥೆಗೆ ಹಂಚಿಕೆ ಮಾಡಲಾದ ಸರ್ವೆ ನಂಬರ್ ವಿಸ್ತೀರ್ಣ ಎಷ್ಟು: | ಮೆ: ದಶಾನ್ಯ ಟೆಕ್ ಪಾರ್ಕ್ಸ್ (ಪ್ರೈ.) ಲಿ ರವರಿಗೆ ದಿನಾಂಕ 17-8-2012 ರಂದು ನಡೆದ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯಲ್ಲಿ "Infrastructure for Software Technology and Business Process" ಯೋಜನೆ ಸ್ಥಾಪನೆಗಾಗಿ ಏಕಘಟಕ ಸಂಕೀರ್ಣದಡಿಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಸರ್ವೆ ನಂ. 143/2, 144/1-ಪಿ, 144/2, 146/1, 146/2, 147/1-ಪಿ, 147/2-ಪಿ, 147/3, 147/4, 147/5 ಮತ್ತು 147/6 ರಲ್ಲಿ ಒಟ್ಟು 8 ಎಕರೆ 23 ಗುಂಟೆ ಜಮೀನನ್ನು ಹಂಚಿಕೆ ಮಾಡಲು ನಿರ್ಣಯಿಸಲಾಗಿರುತ್ತದೆ. |
| ಆ) | ಯಾವ ವರ್ಷದಲ್ಲಿ ಹಂಚಿಕೆ ಪತ್ರ, ಭೂಸ್ವಾಧೀನ ಪತ್ರ, ಲೀಸ್ ಅಗ್ರಿಮೆಂಟ್ ಮಾಡಿಕೊಡಲಾಗಿದೆ. | ಒಟ್ಟು 7 ಎಕರೆ 36 ಗುಂಟೆ ಜಮೀನಿಗೆ ದಿನಾಂಕ:26.09.2014 ರಂದು ಹಂಚಿಕೆ ಮಾಡಿದ್ದು, ದಿನಾಂಕ : 19.11.2014 ರಂದು ಸ್ವಾಧೀನ ಪತ್ರ, ದಿನಾಂಕ:12.06.2017 ರಂದು ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸಲಾಗಿದೆ.<br><br>ಮಾನ್ಯ ನ್ಯಾಯಾಲಯದ ಆದೇಶದ ದಿನಾಂಕ: 13.09.2021 ರಂತೆ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಸರ್ವೆ ನಂ.146/2ಪಿ, 147/1ಪಿ ಮತ್ತು 147/2ಪಿ ಗಳಲ್ಲಿ ಒಟ್ಟು ವಿಸ್ತೀರ್ಣ:0-27 ಗುಂಟೆ ಜಮೀನಿಗೆ ದಿನಾಂಕ: 23.11.2021 ರಂದು ಹಂಚಿಕೆ ಪತ್ರ, ದಿನಾಂಕ : 08.12.2021 ರಂದು ಸ್ವಾಧೀನ ಪತ್ರ ಮತ್ತು ದಿನಾಂಕ: 22.02.2022 ರಂದು ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸಲಾಗಿರುತ್ತದೆ. |

| | | |
|---|---|---|
| ಇ) | ಈ ಸಂಸ್ಥೆಗೆ ಭೂಸ್ವಾಧೀನಪಡಿಸಿದ ಜಮೀನಿನ ಭೂ ಮಾಲೀಕರ ಪೈಕಿ ಕೆಲವು ಜಮೀನಿನ ಭೂ ಮಾಲೀಕರಿಗೆ ಇನ್ನೂ ಪರಿಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಮೆ: ದಶಾನ್ಯ ಟೆಕ್ ಪಾರ್ಕ್ಸ್ (ಪ್ರೈ.) ಲಿ., ರವರಿಗೆ ಶುದ್ಧ ಕ್ರಯ ಪತ್ರ ನೆರವೇರಿಸಿರುವ ಬಗ್ಗೆ ಮಂಡಳಿಯ ಕಾನೂನು ಸಲಹೆಗಾರರು ಶುದ್ಧ ಕ್ರಯ ಪತ್ರವನ್ನು ನೆರವೇರಿಸುವ ಕುರಿತು ಸದರಿಯವರಿಗೆ ಹಂಚಿಕೆ ಮಾಡಿರುವ ಜಮೀನುಗಳ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ, ಭೂಸ್ವಾಧೀನಪಡಿಸಿದ ಜಮೀನುಗಳಿಗೆ ಅವಾರ್ಡ್ ರಚಿಸಿ, ಪರಿಹಾರದ ಮೊತ್ತವನ್ನು ಮಾನ್ಯ ನ್ಯಾಯಾಲಯದಲ್ಲಿ ಠೇವಣಿ ಮಾಡಿದ್ದು, ಕಲಂ.30 & 31 ಎಲ್.ಎ Act ರನ್ವಯ ಸಲ್ಲಿಸಿದ ಅರ್ಜಿ ವಿಚಾರಣೆಗೆ ಇದ್ದು, ಭೂ ಪರಿಹಾರ ಹೆಚ್ಚುವರಿ ಪಡೆಯುವ ಬಗ್ಗೆ ಯಾವುದೇ ಅರ್ಜಿಗಳು ಮಾನ್ಯ ನ್ಯಾಯಾಲಗಳಲ್ಲಿ ಬಾಕಿ ಇರುವುದಿಲ್ಲ ಎಂದು ಅಭಿಪ್ರಾಯ ನೀಡಿರುತ್ತಾರೆ.<br><br>ಸದರಿ ಜಮೀನನ್ನು ಕೆಐಎಡಿಬಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿದ್ದು, ಕಲಂ 28(8) ರಡಿ ಮಂಡಳಿಗೆ ಹಸ್ತಾಂತರವಾಗಿದ್ದು, ಜಮೀನು ಮಂಡಳಿಯ ವಶದಲ್ಲಿರುವುದರಿಂದ, ನಿಯಮಾನುಸಾರ ಹಂಚಿಕೆದಾರರಿಗೆ ಕ್ರಯಪತ್ರ ಮಾಡಿಕೊಡಲಾಗಿದೆ. |
| ಈ) | ಬಂದಿದಲ್ಲಿ, ಭೂ ಪರಿಹಾರ ನೀಡದೆ ಕ್ರಯಪತ್ರ ಮಾಡಿಕೊಡಲು ಅವಕಾಶ ಇದೆಯೇ: | |
| ಉ) | ಸದರಿ ಸಂಸ್ಥೆಗೆ ಸೂಕ್ತ ಸಂಪರ್ಕ ರಸ್ತೆ ಇಲ್ಲದಿದ್ದರೂ ಸಹ ಯಾವ ಮಾನದಂಡದ ಮೇಲೆ ಸೇಲ್ ಡೀಡ್ ಮಾಡಿಕೊಡಲಾಗಿದೆ; | ಸದರಿ ಸಂಸ್ಥೆಯವರಿಗೆ ಒಟ್ಟು 8 ಎಕರೆ 23 ಗುಂಟೆ ಜಮೀನಿನಲ್ಲಿ ಉದ್ದೇಶಿಸಿರುವ ಕಟ್ಟಡಗಳ ಅನುಪಾತವನ್ನು ಅನುಸರಿಸಿ, ಸದರಿ ಜಮೀನಿನ ದಕ್ಷಿಣದ ಕಡೆಗೆ ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಸ.ನಂ.. 12/1, 22/2, 33/1, 33/2 ಹಾಗೂ 35ಪಿ ರಲ್ಲಿ 24.10 ಮೀ ಅಗಲದ ರಸ್ತೆ ಜಾಗವನ್ನಾಗಿ ಒಟ್ಟು 6620.27 ಚ.ಮೀ ಜಮೀನಿನ ಮಾಲೀಕರಾದ M/s. West Palm Developers Pvt Ltd., ರವರು ಆಯುಕ್ತರು ಬಿ.ಬಿ.ಎಂ.ಪಿ ರವರಿಗೆ ಪರಿತ್ಯಾಜನ (Relinquish) ಮಾಡಿರುವ ರಸ್ತೆ ಅಗಲಕ್ಕೆ ಅನುಪಾತ (FAR) ಪರಿಗಣಿಸಿಕೊಂಡು ದಿ: 09-09-2022 ರಂದು ಕಟ್ಟಡ ನಕ್ಷೆ ಅನುಮೋದನೆ ನೀಡಲಾಗಿರುತ್ತದೆ. |

| | | |
|---|---|---|
| ಊ) | ಯೋಜನೆಗೆ ಅನುಷ್ಠಾನಗೊಂಡ ಎರಡು ವರ್ಷಗಳ ನಂತರ ಸೇಲ್ ಡೀಡ್ ನೀಡಲು ಅವಕಾಶವಿದ್ದು, ಈ ಪ್ರಕರಣದಲ್ಲಿ ಅದನ್ನು ಪರಿಶೀಲಿಸದೆ ತರಾತುರಿಯಲ್ಲಿ ಸೇಲ್ ಡೀಡ್ ಮಾಡಿಕೊಟ್ಟಿರುವ ಕಾರಣ ಈ ಪ್ರಕರಣವನ್ನು ತನಿಖೆ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ; | ಕಾರ್ಯಪಾಲಕ ಅಭಿಯಂತರ-2, ಬೆಂಗಳೂರು ಇವರು ದಿನಾಂಕ:02.03.2023 ರಂದು ಸದರಿ ಕಂಪನಿಯವರು ತಮ್ಮ ಉದ್ದೇಶಿತ ಯೋಜನೆಯಾದ "Software Technologies Business Park:" ನ್ನು ಸ್ಥಾಪನೆ ಮಾಡಿರುವುದಾಗಿ ಹಾಗೂ ಒಟ್ಟಾರೆ 59.01% ಭೂ ಬಳಕೆಯನ್ನು ಮಾಡಿರುವುದಾಗಿ ಹಾಗೂ ಸದರಿ ಕಂಪನಿಯವರು ಕಳೆದ 2 ವರ್ಷಗಳ ಮಾರಾಟ ಬಿಲ್ಲುಗಳು (Sales Invoice) ಹಾಗೂ ಬೆಸ್ಕಾಂನ ವಿದ್ಯುತ್‌ನ ಬಳಕೆ ವಿವರಗಳನ್ನು ನೀಡಿರುವ ಬಗ್ಗೆ ವರದಿ ನೀಡಿರುತ್ತಾರೆ. |
| ಎ) | ಹಾಗಿದ್ದಲ್ಲಿ, ಈ ಬಗ್ಗೆ ಯಾವ ರೀತಿ ಕ್ರಮ ಜರುಗಿಸಲು ಸರ್ಕಾರ ಚಿಂತಿಸಿದೆ? | ಸದರಿ ಕಂಪನಿಯವರಿಂದ ಮಂಡಳಿಯು ಪ್ರತಿ ಎಕರೆಗೆ ರೂ.150 ಲಕ್ಷಗಳಂತೆ ಒಟ್ಟು 8 ಎಕರೆ 23 ಗುಂಟೆ ಜಮೀನಿಗೆ ರೂ.12,86,25,000/-ಗಳನ್ನು ಪಾವತಿಸಿಕೊಂಡಿರುತ್ತದೆ. ಅಲ್ಲದೇ ಸದರಿಯವರು ದಿನಾಂಕ:23.03.2023 ರಂದು Undertaking ಪ್ರಮಾಣ ಪತ್ರವನ್ನು ಮಂಡಳಿಗೆ ಸಲ್ಲಿಸಿ, ಮಂಡಳಿಗೆ ಯಾವುದೇ ಹೆಚ್ಚುವರಿ ಭೂ ಪರಿಹಾರದ ಮೊತ್ತವನ್ನು ನೀಡಬೇಕಾಗಿದ್ದಲ್ಲಿ, ಸದರಿ ಮೊತ್ತವನ್ನು ಮಂಡಳಿಗೆ ಕಂಪನಿಯು ಪಾವತಿಸುವುದಾಗಿ ತಿಳಿಸಿರುತ್ತಾರೆ.<br><br>ಸದರಿ ಸಂಸ್ಥೆಗೆ ನಿಯಮಾನುಸಾರ ಶುದ್ಧ ಕ್ರಯಪತ್ರವನ್ನು ನೆರವೇರಿಸಲಾಗಿದೆ. |

**ಸಂಖ್ಯೆ: ಸಿಐ 122 ಐಎಪಿ 2023**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**